**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| **ಸದಸ್ಯರ ಹೆಸರು** | : **ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : **1335 (1545)** |
| **ಉತ್ತರಿಸಬೇಕಾದ ಸಚಿವರು** | : **ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು** |
| **ಉತ್ತರಿಸಬೇಕಾದ ದಿನಾಂಕ** | : **17-03-2026** |

*****

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕೈಮಗ್ಗ, ರೇಷ್ಮೆ, ಕಾಟನ್ ಹಾಗೂ ಜೀನ್ಸ್ ಆಧಾರಿತ ಜವಳಿ ಉದ್ಯಮಗಳು ಸಂಕಷ್ಟಕ್ಕೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಕ್ಷೇತ್ರವನ್ನು ಮನರುಜ್ಜೀವನಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ರಾಜ್ಯದಲ್ಲಿ ಕೈಮಗ್ಗ, ರೇಷ್ಮೆ, ಕಾಟನ್ ಹಾಗೂ ಜೀನ್ಸ್ ಆಧಾರಿತ ಜವಳಿ ಉದ್ಯಮಗಳು ಸಂಕಷ್ಟಕ್ಕೆ ಸಿಲುಕಿರುವ ಬಗ್ಗೆ ಸರ್ಕಾರಕ್ಕೆ ವರದಿಯಾಗಿರುವುದಿಲ್ಲ.<br><br>ಆದರೆ, ರಾಜ್ಯದಲ್ಲಿ ಕೈಮಗ್ಗ, ವಿದ್ಯುತ್ ಮಗ್ಗ ಹಾಗೂ ಜವಳಿ ನೀತಿಯಡಿಯಲ್ಲಿ ಕೈಮಗ್ಗ, ರೇಷ್ಮೆ, ಕಾಟನ್ ಹಾಗೂ ಜೀನ್ಸ್ ಆಧಾರಿತ ಜವಳಿ ಉದ್ಯಮವನ್ನು ಪ್ರೋತ್ಸಾಹಿಸಲು ಸರ್ಕಾರವು ಈ ಕೆಳಕಂಡ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ.<br><br>**ಕೈಮಗ್ಗ ವಲಯ ಯೋಜನೆಗಳು:-**<br><br>• ನೇಕಾರರ ಸಮ್ಮಾನ್ ಯೋಜನೆಯಡಿ ಕೈಮಗ್ಗ ನೇಕಾರರಿಗೆ ವಾರ್ಷಿಕ ರೂ.5,000/- ಗಳ ಆರ್ಥಿಕ ನೆರವು ನೀಡಲಾಗುವುದು.<br>• ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ಸಹಕಾರ ಸಂಘ / ಸಹಕಾರ ಬ್ಯಾಂಕ್‌ಗಳಿಂದ ಪಡೆಯುವ ಸಾಲಕ್ಕೆ ಶೂನ್ಯ ಹಾಗೂ ಶೇ.1 ರ ಬಡ್ಡಿ ದರದಲ್ಲಿ ರೂ.2.00 ಲಕ್ಷಗಳವರೆಗೆ, ಶೇ.3 ರ ಬಡ್ಡಿ ದರದಲ್ಲಿ ರೂ.2.00 ಲಕ್ಷಗಳಿಂದ ರೂ.5.00 ಲಕ್ಷಗಳವರೆಗೆ ಸಾಲ ನೀಡಲಾಗುವುದು.<br>• ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ಸಹಕಾರ ಸಂಘ / ಸಹಕಾರ ಬ್ಯಾಂಕ್ / ವಾಣಿಜ್ಯ ಬ್ಯಾಂಕ್‌ಗಳಿಂದ ಪಡೆಯುವ ಸಾಲಕ್ಕೆ ಶೇ.8 ರಷ್ಟು ಬಡ್ಡಿ ಸಹಾಯಧನ ನೀಡಲಾಗುವುದು.<br>• ಕೈಮಗ್ಗ ನೇಕಾರರ ಸಹಕಾರ ಸಂಘಗಳು ತಮ್ಮ ಕೈಮಗ್ಗ ಉತ್ಪನ್ನಗಳ ಮಾರಾಟ ಮೇಲೆ ರಾಜ್ಯ ಸರ್ಕಾರದಿಂದ ಶೇ.20ರಷ್ಟು ರಿಬೇಟ್ ಅನ್ನು ಮರು ಸಂದಾಯ ಪಾವತಿಸಲಾಗುವುದು.<br>• ಕಚ್ಚಾಮಾಲು ಖರೀದಿ ಮೇಲೆ ಕೈಮಗ್ಗ ಸಹಕಾರ ಸಂಘಗಳಿಗೆ ಪ್ರತಿ ಕೆ.ಜಿ ಗೆ ರೂ.15/- ರ ಸಹಾಯಧನ ನೀಡಲಾಗುವುದು.<br>• ಮಿತವ್ಯಯ ನಿಧಿ ಯೋಜನೆಯಡಿ ನೇಕಾರರ ಮಜೂರಿಯಿಂದ ಶೇ.8 ನ್ನು ಕಟಾಯಿಸಿ ರಾಜ್ಯ ಸರ್ಕಾರದ ಶೇ.8 ರ ಸಮಚಂದಾ ಸೇರಿಸಿ ಖಜಾನೆಯಲ್ಲಿ ಜಮಾ ಮಾಡಲಾಗುವುದು |

ಜಮೆಯಾದ ಮೊತ್ತಕ್ಕೆ ಶೇ.12 ರ ಬಡ್ಡಿಯನ್ನು ನೀಡಲಾಗುವುದು.

- ರಾಜ್ಯದ ಕೈಮಗ್ಗ ನೇಕಾರರ ಕೈಮಗ್ಗ ಉತ್ಪನ್ನಗಳನ್ನು ಪ್ರೋತ್ಸಾಹಿಸಲು ಹಾಗೂ ಬೆಂಬಲ ನೀಡಲು ರೇಷ್ಮೆ, ಹತ್ತಿ ಮತ್ತು ಉಣ್ಣೆ ಕ್ಷೇತ್ರ / ವಲಯದಲ್ಲಿ ಕೈಮಗ್ಗ ನೇಕಾರರು ಹೊಂದಿರುವ ನೈಪುಣ್ಯತೆ / ಶ್ರೇಷ್ಠತೆ / ತಾಂತ್ರಿಕತೆ / ಉತ್ಕೃಷ್ಟತೆಗಾಗಿ ಕೈಮಗ್ಗ ನೇಕಾರರಿಗೆ ರಾಜ್ಯ ಮಟ್ಟದ ಪ್ರಶಸ್ತಿ ನೀಡಲಾಗುವುದು.
- ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಾಮಾನ್ಯ ವರ್ಗದ ಫಲಾನುಭವಿಗಳಿಂದ ಸ್ಥಾಪಿಸಲಾಗುವ ಅತಿ ಸಣ್ಣ (ಎಂ.ಇ) ಘಟಕಗಳಿಗೆ ಗರಿಷ್ಠ ಶೇಕಡ 50 ರಷ್ಟು ಅಥವಾ ರೂ.50.00 ಲಕ್ಷಗಳ ಸರ್ಕಾರದ ಸಹಾಯಧನ ನೀಡಲಾಗುವುದು.
- ಕೇಂದ್ರ ಪುರಸ್ಕೃತ ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ಕಾರ್ಯಕ್ರಮ (NHDP) ದಡಿ ಕೈಮಗ್ಗ ನೇಕಾರರಿಗೆ ಮುದ್ರಾ ಯೋಜನೆಯಡಿ ಸಾಲ ಸೌಲಭ್ಯ ನೀಡಲಾಗುವುದು.
- ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಡಿ ನೋಂದಾಯಿತ ನೇಕಾರರಿಗೆ ಕಚ್ಚಾ ನೂಲನ್ನು ಒದಗಿಸಿ ಅವರು ಉತ್ಪಾದಿಸಿದ ಬಟ್ಟೆಗಳನ್ನು ಸ್ವೀಕರಿಸಿ ಪರಿವರ್ತನಾ ಶುಲ್ಕವನ್ನು ಒದಗಿಸಲಾಗುವುದು.

· **ವಿದ್ಯುತ್‌ಮಗ್ಗ ವಲಯ ಯೋಜನೆಗಳು:-**

- ನೇಕಾರರ ಸಮ್ಮಾನ್ ಯೋಜನೆಯಡಿ ವಿದ್ಯುತ್‌ಮಗ್ಗ ನೇಕಾರರಿಗೆ ವಾರ್ಷಿಕ ರೂ.5,000/- ಗಳ ಆರ್ಥಿಕ ನೆರವು ನೀಡುವುದು.
- ನೇಕಾರರ ಮಕ್ಕಳಿಗೆ ವಿದ್ಯಾರ್ಥಿ ವೇತನ
- 02 ವಿದ್ಯುತ್ ಮಗ್ಗ ಖರೀದಿಗೆ ಸಹಾಯಧನ.
- ಎಲೆಕ್ಟ್ರಾನಿಕ್ ಜಕಾರ್ಡ್ ಖರೀದಿಗೆ ಸಹಾಯಧನ.
- ವಿದ್ಯುತ್ ರಿಯಾಯಿತಿ ಸಹಾಯಧನ – 01 ರಿಂದ 10 ಹೆಚ್.ಪಿ ವಿದ್ಯುತ್ ಸಂಪರ್ಕ ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ ಉಚಿತವಾಗಿ ವಿದ್ಯುತ್ ಪೂರೈಸಿ ಶೂನ್ಯ ಬಿಲ್ ನೀಡಲಾಗುತ್ತಿದೆ ಹಾಗೂ 10.01 ರಿಂದ 20 ಹೆಚ್.ಪಿ ವಿದ್ಯುತ್ ಸಂಪರ್ಕ ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ ಬಳಸಿದ ಒಟ್ಟು ಯೂನಿಟ್‌ಗಳಿಗೆ ಪ್ರತಿ ಯೂನಿಟ್‌ಗೆ ರೂ.1.25 ರಂತೆ ವಿದ್ಯುತ್ ಶುಲ್ಕವನ್ನು (Energy Charges) ಘಟಕದವರು ಪಾವತಿಸುವುದು. ಬಾಕಿ ಉಳಿಯುವ ವಿದ್ಯುತ್ ಶುಲ್ಕದ ಮೊತ್ತವನ್ನು ಮಾತ್ರ ಸರ್ಕಾರದ ಬೊಕ್ಕಸದಿಂದ ಭರಿಸಲಾಗುತ್ತಿದೆ.
- 20 ಹೆಚ್.ಪಿ ಇಂದ 200 ಹೆಚ್.ಪಿ ವರೆಗಿನ ವಿದ್ಯುತ್ ಸಂಪರ್ಕ ಹೊಂದಿರುವ SCSP / TSP ವಿದ್ಯುತ್ ಮಗ್ಗ ಘಟಕಗಳಿಗೆ Energy Charges ನಲ್ಲಿ ಶೇ.50 ರಷ್ಟು ವಿದ್ಯುತ್ ಸಹಾಯಧನ ಒದಗಿಸಲಾಗುವುದು.
- ಸೈಜಿಂಗ್ ಘಟಕ ಸ್ಥಾಪನೆಗೆ ಸಹಾಯಧನ

| | | |
|---|---|---|
| | | • ಮಿನಿ ಪವರ್‌ಲೂಮ್ ಪಾರ್ಕ್ ಸ್ಥಾಪನೆಗೆ ಸಹಾಯಧನ<br>• ಪ್ರೊಸೆಸ್ಸಿಂಗ್ ಘಟಕ ಸ್ಥಾಪನೆಗೆ ಸಹಾಯಧನ<br>• ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ರಡಿ ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತಿ ಸಣ್ಣ (ಎಸ್.ಎಂ.ಇ) ಘಟಕಗಳ ಸ್ಥಾಪನೆಗೆ ಸಹಾಯಧನ.<br><br>**ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2019-24:-**<br>ರಾಜ್ಯದಲ್ಲಿ ಜವಳಿ ಕೈಗಾರಿಕೆಗಳಿಗೆ ನೂತನ ಜವಳಿ ಹಾಗೂ ಸಿದ್ಧ ಉಡುಪು ನೀತಿ 2019-24 ರಡಿ ಲಭ್ಯವಿರುವ ಈ ಕೆಳಕಂಡ ಪ್ರೋತ್ಸಾಹನವನ್ನು ನೀಡಲಾಗುತ್ತಿದೆ.<br><br>• ಸಾಲಾಧಾರಿತ ಬಂಡವಾಳ ಸಹಾಯಧನ (10% ರಿಂದ 30% ಸಹಾಯಧನ ಒಟ್ಟು ಬಂಡವಾಳ ಹೂಡಿಕೆಯ ಮೇಲೆ)<br>• ಬಡ್ಡಿ ಸಹಾಯಧನ (ಮದ್ಯಮ ಹಾಗೂ ಬೃಹತ್) ಜವಳಿ /ಸಿದ್ಧಉಡುಪು ಘಟಕಗಳಿಗೆ ಮೊದಲ 05 ವರ್ಷಗಳಿಗೆ ಅವಧಿ ಸಾಲಗಳ ಮೇಲೆ ವಾರ್ಷಿಕ ಶೇ.5 ರಷ್ಟು ಬಡ್ಡಿ ಸಹಾಯಧನ) ವಿದ್ಯುತ್‌ಚ್ಛಕ್ತಿ ಮರುಪಾವತಿ ಸಹಾಯಧನ (ಅತಿ ಸಣ್ಣ ಮತ್ತು ಸಣ್ಣ ಘಟಕಗಳಿಗೆ ಪ್ರತಿ ಯುನಿಟ್‌ಗೆ ರೂ.1/- ರಿಂದ 2/-ರಂತೆ ವಿದ್ಯುತ್ ವೆಚ್ಚದ ಮರುಪಾವತಿ)<br>• ಇ.ಎಸ್.ಐ & ಇ.ಪಿ.ಎಫ್ ಮರುಪಾವತಿ ಸಹಾಯಧನ (ಶೇ.75 ರಷ್ಟು ಮಾಲೀಕರ ವಂತಿಕೆ ಮರುಪಾವತಿ)<br>• ವೇತನ ಸಹಾಯಧನ (ಸಿದ್ಧ ಉಡುಪು ಘಟಕಗಳಿಗೆ ಪ್ರತಿ ಕಾರ್ಮಿಕರಿಗೆ ರೂ2,000/- ರಿಂದ ರೂ.3,000/- ವೇತನ ಸಹಾಯಧನ<br>• ಶೇ.100 ರಷ್ಟು ಮುದ್ರಾಂಕ ಶುಲ್ಕ ವಿನಾಯಿತಿ & ಪ್ರತಿ ರೂ.1,000/-ಕ್ಕೆ ರೂ.1/-ರ ದರದಲ್ಲಿ ನೋಂದಣಿ ಶುಲ್ಕ ರಿಯಾಯಿತಿ.<br>• ತ್ಯಾಜ್ಯ ವಿಲೇವಾರಿ ಘಟಕಕ್ಕೆ ಶೇ.50 ರಷ್ಟು ಸಹಾಯಧನ ಅಥವಾ ಗರಿಷ್ಠ ರೂ.5.00 ಕೋಟಿ ಇವುಗಳಲ್ಲಿ ಯಾವುದು ಕಡಿಮೆಯೋ ಅದು. |
| ಆ) | ವಿವಿಧ ಜಿಲ್ಲೆಗಳಲ್ಲಿ ಪ್ರಸ್ತುತ ಎಷ್ಟು ಕೈಮಗ್ಗ ಹಾಗೂ ಪವರ್‌ಲೂಮ್ ಘಟಕಗಳು ಕಾರ್ಯನಿರ್ವಸುತ್ತಿವೆ; ಈವರೆಗೆ ಮುಚ್ಚಲ್ಪಟ್ಟ ಘಟಕಗಳೆಷ್ಟು; ಮೊಳಕಾಲ್ಮೂರು, ಮೈಸೂರು ಇಳಕಲ್, ಗುಳೇಗುಡ್ಡ, ಉಡುಪಿ ಸೇರಿದಂತೆ ವಿವಿಧ ಪ್ರದೇಶಗಳ ಸಾಂಪ್ರದಾಯಿಕ ಸೀರೆ ಹಾಗೂ ಜವಳಿ ಉತ್ಪನ್ನಗಳಿಗೆ ಸಮರ್ಪಕ ಮಾರುಕಟ್ಟೆ ಸೌಲಭ್ಯ ಒದಗಿಸಲು ಸರ್ಕಾರದ ಯೋಜನೆಗಳೇನು; | ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರಸ್ತುತ 15817 ಕೈಮಗ್ಗ ಹಾಗೂ 39651 ಪವರ್‌ಲೂಮ್ ಘಟಕಗಳು ಕಾರ್ಯನಿರ್ವಹಿಸುತ್ತಿವೆ ಹಾಗೂ ಈವರೆಗೆ 357 ಕೈಮಗ್ಗ ಹಾಗೂ 773 ಪವರ್‌ಲೂಮ್ ಘಟಕಗಳು ಮುಚ್ಚಲ್ಪಟ್ಟಿವೆ. ಜಿಲ್ಲಾವಾರು ವಿವರಗಳನ್ನು ಅನುಬಂಧ ದಲ್ಲಿ ಒದಗಿಸಿದೆ.<br><br>ಮೊಳಕಾಲ್ಮೂರು, ಮೈಸೂರು ಇಳಕಲ್, ಗುಳೇಗುಡ್ಡ, ಉಡುಪಿ ಸೇರಿದಂತೆ ವಿವಿಧ ಪ್ರದೇಶಗಳ ಸಾಂಪ್ರದಾಯಿಕ ಸೀರೆ ಹಾಗೂ ಜವಳಿ ಉತ್ಪನ್ನಗಳಿಗೆ ಈ ಕೆಳಕಂಡಂತೆ ಮಾರುಕಟ್ಟೆ ಸೌಲಭ್ಯವನ್ನು ಸರ್ಕಾರವು ಒದಗಿಸಲಾಗುತ್ತಿದೆ.<br><br>• ರಾಜ್ಯ ಸರ್ಕಾರದ ವತಿಯಿಂದ ಕೈಮಗ್ಗ ನೇಕಾರರ ಸಹಕಾರ ಸಂಘಗಳು ಹಾಗೂ ಕೈಮಗ್ಗ ಮಹಾಮಂಡಳಗಳು / ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ ತಯಾರಿಸಲಾದ |

| | | |
|---|---|---|
| | | ಕೈಮಗ್ಗ ಉತ್ಪನ್ನಗಳಿಗೆ ವರ್ಷದಲ್ಲಿ 365 ದಿನಗಳ ಅವಧಿಗೆ ಮಾರಾಟ ಮಾಡಿದ ಕೈಮಗ್ಗ ಉತ್ಪನ್ನಗಳ ಮೌಲ್ಯದ ಮೇಲೆ ಶೇಕಡ 20ರಷ್ಟು ರಿಬೇಟ್ ಮಾರುಕಟ್ಟೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.<br>• ಕೇಂದ್ರ ಸರ್ಕಾರದ ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ಕಾರ್ಯಕ್ರಮ (National Handloom Development Programme-NHDP) ದಡಿ ರಾಷ್ಟ್ರೀಯ ಕೈಮಗ್ಗ ಮೇಳ (National Handloom Expo - NHE), ರಾಜ್ಯ ಮಟ್ಟದ ಕೈಮಗ್ಗ ಮೇಳ (State Handloom Expo - SHE) ಹಾಗೂ ಜಿಲ್ಲಾ ಮಟ್ಟದ ಕೈಮಗ್ಗ ಮೇಳ (District Handloom Expo-DHE) ಗಳನ್ನು ಆಯೋಜಿಸಿ ಕೈಮಗ್ಗ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ.<br>• ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವತಿಯಿಂದ ಕೈಮಗ್ಗ ನೇಕಾರರಿಗೆ ಉತ್ಕೃಷ್ಟ ಗುಣಮಟ್ಟದ ರೇಷ್ಮೆ ಹಾಗೂ ಹತ್ತಿ ನೂಲನ್ನು ಸರಬರಾಜು ಮಾಡಿ, ಉತ್ಪಾದಿಸಲಾದ ಸಾಂಪ್ರದಾಯಿಕ ರೇಷ್ಮೆ ಸೀರೆ, ಉಡುಪಿ ಸೀರೆ, ಇಳಕಲ್ ಸೀರೆ ಹಾಗೂ ಇತರೆ ಕೈಮಗ್ಗ ಉತ್ಪನ್ನಗಳನ್ನು ನಿಗಮದ ವತಿಯಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸ್ಥಾಪಿತವಾಗಿರುವ ಪ್ರಿಯದರ್ಶಿನಿ ಮಾರಾಟ ಮಳಿಗೆಗಳ ಮೂಲಕ ಮಾರಾಟ ಮಾಡಲಾಗುತ್ತಿದೆ.<br>• ಕೆ.ಹೆಚ್.ಡಿ.ಸಿ. ನಿಗಮದ ಕೈಮಗ್ಗ ಉತ್ಪನ್ನಗಳನ್ನು ಇ–ಕಾಮರ್ಸ್ ವೇದಿಕೆ ಮುಖಾಂತರ ಮಾರಾಟ ಮಾಡುವುದರ ಮೂಲಕ ಕೆ.ಹೆಚ್.ಡಿ.ಸಿ. ನಿಗಮ ತನ್ನ ಸಂಪನ್ಮೂಲವನ್ನು ಹೆಚ್ಚಿಸಿಕೊಳ್ಳುವ ಯೋಜನೆ ಹಮ್ಮಿಕೊಂಡಿರುತ್ತದೆ. ಈ ನಿಟ್ಟಿನಲ್ಲಿ ಪ್ರಸ್ತುತ ಪ್ರಾಯೋಗಿಕವಾಗಿ ನೇಕಾರರ ಭವನದಲ್ಲಿರುವ ಪ್ರಿಯದರ್ಶಿನಿ ಮಾರಾಟ ಮಳಿಗೆಯಲ್ಲಿ ಇ–ಕಾಮರ್ಸ್ ವೇದಿಕೆಯನ್ನು ಪ್ರಾರಂಭ ಮಾಡಲಾಗಿದ್ದು, ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ಬರುತ್ತಿದೆ.<br>• ಬೆಂಗಳೂರು ಅಂತರಾಷ್ಟ್ರೀಯ ನಿಲ್ದಾಣದ ಆವರಣದಲ್ಲಿ "ಕಲಾಲೋಕ" ಕೈಮಗ್ಗ ಮಾರಾಟ ಮಳಿಗೆಯನ್ನು ಸ್ಥಾಪಿಸಲಾಗಿದೆ. ಸದರಿ ಕಲಾಲೋಕ ಕೈಮಗ್ಗ ಮಾರಾಟ ಮಳಿಗೆಯ ಮುಖಾಂತರ ರಾಜ್ಯದ ಕೈಮಗ್ಗ ಉತ್ಪನ್ನಗಳನ್ನು ಹಾಗೂ ವಿಶ್ವವಿಖ್ಯಾತ ಸಾಂಪ್ರದಾಯಿಕ ಸೀರೆಗಳ ಮಾರಾಟಕ್ಕೆ ಸೌಲಭ್ಯ ಕಲ್ಪಿಸಲಾಗಿದೆ. |
| ಇ) | ಕಚ್ಚಾ ವಸ್ತುಗಳ ಬೆಲೆ ಏರಿಕೆಯಿಂದ ನೇಕಾರರು ಸಂಕಷ್ಟದಲ್ಲಿದ್ದು ಕಚ್ಚಾ ವಸ್ತುಗಳ ಸಬ್ಸಿಡಿ ಮತ್ತು ವಿದ್ಯುತ್ ದರ ರಿಯಾಯಿತಿ ಕುರಿತು ಸರ್ಕಾರದ ನಿರ್ಧಾರವೇನು; | ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮದ ಮುಖಾಂತರ ಕೈಮಗ್ಗ ಸಹಕಾರ ಸಂಘಗಳು ಖರೀದಿಸುವ ಕಚ್ಚಾ ನೂಲಿಗೆ ಪ್ರತಿ ಕೆ.ಜಿಗೆ ರೂ.15/– ರ ಸಹಾಯಧನ ನೀಡಲಾಗುವುದು.<br>ವಿದ್ಯುತ್ ರಿಯಾಯಿತಿ ಸಹಾಯಧನ–01 ರಿಂದ 10 ಹೆಚ್.ಪಿ ವಿದ್ಯುತ್ ಸಂಪರ್ಕ ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ ಉಚಿತವಾಗಿ ವಿದ್ಯುತ್ ಪೂರೈಸಿ ಶೂನ್ಯ ಬಿಲ್ ನೀಡಲಾಗುತ್ತಿದೆ ಹಾಗೂ |

| | | |
|---|---|---|
| | | 10.01 ರಿಂದ 20 ಹೆಚ್.ಪಿ ವಿದ್ಯುತ್ ಸಂಪರ್ಕ ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ ಬಳಸಿದ ಒಟ್ಟು ಯೂನಿಟ್‌ಗಳಿಗೆ ಪ್ರತಿ ಯೂನಿಟ್‌ಗೆ ರೂ.1.25 ರಂತೆ ವಿದ್ಯುತ್ ಶುಲ್ಕವನ್ನು (Energy Charges) ಘಟಕದವರು ಪಾವತಿಸುವುದು. ಬಾಕಿ ಉಳಿಯುವ ವಿದ್ಯುತ್ ಶುಲ್ಕದ ಮೊತ್ತವನ್ನು ಮಾತ್ರ ಸರ್ಕಾರದ ಬೊಕ್ಕಸದಿಂದ ಭರಿಸಲಾಗುತ್ತಿದೆ. |
| ಈ) | ಹತ್ತಿ ಉತ್ಪಾದನೆ ಕುಸಿಯುತ್ತಿರುವ ಹಿನ್ನಲೆಯಲ್ಲಿ ಜವಳಿ ಉದ್ಯಮದ ಮೇಲೆ ಉಂಟಾಗಿರುವ ಪರಿಣಾಮಗಳ ಬಗ್ಗೆ ಸರ್ಕಾರ ಅಧ್ಯಯನ ನಡೆಸಿದೆಯೇ; ಹತ್ತಿ ಬೆಳೆಗಾರರು ಹಾಗೂ ಕಾಟನ್ ಮಿಲ್‌ಗಳಿಗೆ ಪ್ರೋತ್ಸಾಹಧನ ಹೆಚ್ಚಿಸುವ ಕುರಿತು ಸರ್ಕಾರದ ನಿಲುವೇನು | ಹತ್ತಿ ಉತ್ಪಾದನೆ ಕುಸಿಯುತ್ತಿರುವ ಹಿನ್ನೆಲೆಯಲ್ಲಿ ಜವಳಿ ಉದ್ಯಮದ ಮೇಲೆ ಉಂಟಾಗಿರುವ ಪರಿಣಾಮಗಳ ಬಗ್ಗೆ ಸರ್ಕಾರ ವತಿಯಿಂದ ಅಧ್ಯಯನ ನಡೆಸಿರುವುದಿಲ್ಲ.<br><br>ಹತ್ತಿ ಬೆಳೆಗಾರರು ಹಾಗೂ ಕಾಟನ್ ಮಿಲ್ ಗಳಿಗೆ ಪ್ರೋತ್ಸಾಹಧನ ಹೆಚ್ಚಿಸುವ ಕುರಿತು ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |
| ಉ) | ಜೀನ್ಸ್ ಹಾಗೂ ಅಪೆರಲ್ ಉದ್ಯಮಕ್ಕೆ ಸಮರ್ಪಕ ಮಾರುಕಟ್ಟೆ, ರಫ್ತು ಸೌಲಭ್ಯ ಹಾಗೂ ತಾಂತ್ರಿಕ ಬೆಂಬಲ ಒದಗಿಸಲು ಮತ್ತು ರಾಜ್ಯದಲ್ಲಿ ಅಪೆರಲ್ ಪಾರ್ಕ್ ಸ್ಥಾಪನೆಗಾಗಿ ಮೀಸಲಿಟ್ಟಿರುವ 250 ಎಕರೆ ಭೂಮಿಯ ಕುರಿತು ಪ್ರಸ್ತುತ ಸ್ಥಿತಿಗತಿಗಳೇನು; ಯೋಜನೆ ಯಾವ ಹಂತದಲ್ಲಿದೆ; | ಬಳ್ಳಾರಿ ತಾಲ್ಲೂಕು ಮತ್ತು ಜಿಲ್ಲೆಯಲ್ಲಿ ಸಂಜೀವರಾಯನ ಕೋಟೆ ಗ್ರಾಮವು ಸುಮಾರು 13 ಕಿ.ಮೀ ದೂರದಲ್ಲಿದ್ದು ಸದರಿ ಪ್ರದೇಶದಲ್ಲಿ ಸಂಜೀವರಾಯನ ಕೋಟೆ ಕೈಗಾರಿಕಾ ಪ್ರದೇಶ ಜೀನ್ಸ್/ ಟೆಕ್ಸ್ಟೈಲ್ ಪಾರ್ಕ್ ಮೊದಲನೇ ಹಂತವನ್ನು 154.58 ಎಕರೆ ಪ್ರದೇಶದಲ್ಲಿ KIADB ವತಿಯಿಂದ ಅಭಿವೃದ್ಧಿಪಡಿಸಲಾಗುತ್ತಿದೆ ಮತ್ತು 2ನೇ ಹಂತದಲ್ಲಿ 492.39 ಎಕರೆ ಪ್ರದೇಶವನ್ನು ಭೂಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ಹಂತದಲ್ಲಿರುತ್ತದೆ.<br><br>ಸಂಜೀವರಾಯನ ಕೋಟೆ ಕೈಗಾರಿಕಾ ಪ್ರದೇಶದ 1ನೇ ಹಂತದ ಕಾಮಗಾರಿಯನ್ನು ಮಾರ್ಚ್ 2026ರ ಅಂತ್ಯದೊಳಗಾಗಿ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು. |
| ಊ) | ಪರಿಸರ ಇಲಾಖೆ ಸೂಚನೆಯಿಂದ ಮುಚ್ಚಲ್ಪಟ್ಟಿರುವ ವಾರ್ಷಿಂಗ್ ಯುನಿಟ್‌ಗಳ ಮರು ಆರಂಭಕ್ಕೆ ಸರ್ಕಾರ ನೀಡಿದ 22 ಕೋಟಿ ರೂ. ಮೊತ್ತದ ಸಿಇಟಿಪಿ ಪ್ಲಾಂಟ್ ಸ್ಥಾಪನೆ ಭರವಸೆಯನ್ನು ಯಾವಾಗ ಈಡೇರಿಸಲಾಗುವುದು? | ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (KKRDB) ವತಿಯಿಂದ ಸಿ.ಇ.ಟಿ.ಪಿ. (CETP) ಗೆ ಯೋಜನಾ ವರದಿಯನ್ನು ತಯಾರಿಸುವ ಹಂತದಲ್ಲಿರುತ್ತದೆ. |

**ಸಂಖ್ಯೆ: CI 81 JAKE 2026**

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

# ಅನುಬಂಧ

| ಕರ್ನಾಟಕ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1335 (1545) ಕ್ಕೆ ಜಿಲ್ಲಾವಾರು ಮಾಹಿತಿ | | | | | |
|---|---|---|---|---|---|
| ಕ್ರ. ಸಂ | ಜಿಲ್ಲೆ | ಕಾರ್ಯ ನಿರತ ಘಟಕ | | ಮುಚ್ಚಲ್ಪಟ್ಟ ಘಟಕ | |
| | | ಕೈಮಗ್ಗ ಘಟಕ | ಪವರ್ ಲೂಮ್ ಘಟಕ | ಕೈಮಗ್ಗ ಘಟಕ | ಪವರ್ ಲೂಮ್ ಘಟಕ |
| 1 | ಬೆಂಗಳೂರು ನಗರ | 545 | 5143 | 0 | 0 |
| 2 | ಬೆಂಗಳೂರು ಗ್ರಾಮಾಂತರ | 76 | 18695 | 0 | 0 |
| 3 | ರಾಮನಗರ | 68 | 572 | 12 | 38 |
| 4 | ಚಿಕ್ಕಬಳ್ಳಾಪುರ | 510 | 380 | 10 | 22 |
| 5 | ಮೈಸೂರು | 4 | 22 | 0 | 3 |
| 6 | ಮಂಡ್ಯ | 53 | 93 | 0 | 2 |
| 7 | ಕೊಡಗು | 46 | 0 | 16 | 0 |
| 8 | ಕೋಲಾರ | 145 | 215 | 0 | 11 |
| 9 | ಚಾಮರಾಜನಗರ | 670 | 80 | 0 | 0 |
| 10 | ಬೆಳಗಾವಿ | 1751 | 5342 | 0 | 0 |
| 11 | ಬಾಗಲಕೋಟೆ | 6514 | 5297 | 0 | 442 |
| 12 | ಧಾರವಾಡ | 3 | 50 | 0 | 9 |
| 13 | ಗದಗ | 450 | 583 | 14 | 32 |
| 14 | ಹಾವೇರಿ | 680 | 552 | 30 | 8 |
| 15 | ಉತ್ತರ ಕನ್ನಡ | 3 | 3 | 0 | 0 |
| 16 | ವಿಜಯಪುರ | 264 | 17 | 194 | 7 |
| 17 | ತುಮಕೂರು | 1066 | 1896 | 42 | 69 |
| 18 | ಚಿತ್ರದುರ್ಗ | 2055 | 23 | 35 | 0 |
| 19 | ದಾವಣಗೆರೆ | 9 | 10 | 0 | 0 |
| 20 | ಶಿವಮೊಗ್ಗ | 6 | 1 | 0 | 0 |
| 21 | ಚಿಕ್ಕಮಗಳೂರು | 70 | 0 | 0 | 0 |
| 22 | ಹಾಸನ | 133 | 396 | 0 | 0 |
| 23 | ದಕ್ಷಿಣಕನ್ನಡ | 55 | 0 | 0 | 0 |
| 24 | ಉಡುಪಿ | 45 | 0 | 0 | 0 |
| 25 | ಕಲಬುರಗಿ | 20 | 10 | 4 | 3 |
| 26 | ಬಳ್ಳಾರಿ | 353 | 0 | 0 | 0 |
| 27 | ಕೊಪ್ಪಳ | 194 | 270 | 0 | 127 |
| 28 | ರಾಯಚೂರು | 4 | 0 | 0 | 0 |
| 29 | ಬೀದರ್ | 20 | 1 | 0 | 0 |
| 30 | ಯಾದಗಿರಿ | 5 | 0 | 0 | 0 |
| | ಒಟ್ಟು | 15817 | 39651 | 357 | 773 |

ಅಪರ ನಿರ್ದೇಶಕರು (ಕೈ&ಜ),
ಕೈಮಗ್ಗ ಮತ್ತು ಜವಳಿ